# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :: 1307
ಸದಸ್ಯರ ಹೆಸರು :: ಶ್ರೀ ಅರವಿಂದ ಕುಮಾರ್ ಅರಳಿ
ಉತ್ತರಿಸುವ ದಿನಾಂಕ :: 18-03-2020
ಉತ್ತರಿಸುವ ಸಚಿವರು :: ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ 2016 ರಿಂದ 2019 ರವರೆಗೆ ಎಷ್ಟು ಎಕರೆ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ (NA) ಮಾಡಲಾಗಿದೆ; ನಿಯಮಾನುಸಾರವಾಗಿ ಮಾಡಲಾಗಿದೆಯೇ; ನಿಯಮಾನುಸಾರವಾಗಿದ್ದಲ್ಲಿ ಇದರಲ್ಲಿ ಖಾಸಗಿ ಜಮೀನು, ಇನಾಮಿ ಜಮೀನು ಹಾಗೂ ವಕ್ಫ್‌ಗೆ ಸೇರಿದ ಜಮೀನು ಎಷ್ಟು? (ವಿವರವಾದ ಮಾಹಿತಿ ನೀಡುವುದು) | ಬೀದರ್ ಜಿಲ್ಲೆಯಲ್ಲಿ 2016 ರಿಂದ 2019ರವರೆಗೆ 1787 ಎಕರೆ 32 ಗುಂಟೆ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ (NA) ಭೂಪರಿವರ್ತನೆ ಮಾಡಲಾಗಿರುತ್ತದೆ. ಈ ಭೂ ಪರಿವರ್ತನೆಯನ್ನು ನಿಯಮಾನುಸಾರವಾಗಿ ಮಾಡಲಾಗಿರುತ್ತದೆ.<br><br>ಇದರಲ್ಲಿ 1787 ಎಕರೆ 32 ಗುಂಟೆ ಖಾಸಗಿ ಜಮೀನಾಗಿರುತ್ತದೆ. ಇನಾಮ್ ಹಾಗೂ ವಕ್ಫ್‌ಗೆ ಸೇರಿದ ಜಮೀನು ಇರುವುದಿಲ್ಲ.<br><br>ಆದರೆ, ಬೀದರ್ ಜಿಲ್ಲೆ, ಭಾಲ್ಕಿ ತಾಲ್ಲೂಕಿನ ಭಾಲ್ಕಿ ಗ್ರಾಮದ ಸ.ನಂ.335ರಲ್ಲಿ ವಿಸ್ತೀರ್ಣ 5.00 ಎಕರೆ ಭೂಮಿಯನ್ನು ತಹಶೀಲ್ದಾರ್ ಭಾಲ್ಕಿ ಮತ್ತು ಸಹಾಯಕ ಆಯುಕ್ತರು ಬಸವಕಲ್ಯಾಣ ರವರ ಶಿಫಾರಸ್ಸಿನ ಮೇಲೆ ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲಾಗಿದ್ದು, ನಂತರ ಸದರಿ ಭೂಮಿ ವಕ್ಫ್ ಭೂಮಿ ಇರುತ್ತದೆಂದು ದೂರು ಸಲ್ಲಿಕೆಯಾಗಿರುವ ಮೇರೆಗೆ ಪ್ರಾದೇಶಿಕ ಆಯುಕ್ತರು ಕಲಬುರಗಿ ರವರ ನಿರ್ದೇಶನದ ಮೇರೆಗೆ ವಿಚಾರಣೆ ಕೈಗೊಂಡು ಜಿಲ್ಲಾಧಿಕಾರಿ ಕಛೇರಿಯ ಆದೇಶ ದಿನಾಂಕ: 02-03-2020ರಲ್ಲಿನ ನಡವಳಿ ಆದೇಶದಂತೆ ಭೂ ಪರಿವರ್ತನೆ ಆದೇಶ ಹಿಂಪಡೆಯಲಾಗಿರುತ್ತದೆ. |

ಸಂಖ್ಯೆ: ಆರ್‌ಡಿ 17 ಎಲ್‌ಜಿಐ 2020

(ಆರ್. ಅಶೋಕ್)
ಕಂದಾಯ ಸಚಿವರು